ಕತೆಗಾರನಿಗೆ ಸಂಶೋಧಕನೊಬ್ಬನ ಮನಸ್ಸು, ಜನಪದ ತಿಳಿವಳಿಕೆ ಮತ್ತು ಒಳಪಂಥಗಳ ಪರಿಚಯಗಳಿವೆ. ಅವನ್ನು ಕತೆಯ ವಸ್ತುವಾಗಿಸುವಾಗ 'ಕೇಂದ್ರ' ತೆಳುವಾಗಿ, ತೀರಾ ವರದಿಯ ಮಟ್ಟಕ್ಕೆ ಹೋಗುವ ಅಪಾಯವಿರುತ್ತದೆ. ಕಟ್ಟಿಯವರಿಗೆ ಈ ಎಚ್ಚರ ಇರುವುದರಿಂದ ಸದಾ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಈ ದಾರಿಯಲ್ಲಿ ಸಾಗುವ ಕತೆಗಳೆಂದರೆ, 'ಊರ್ಧ್ವರೇತ', 'ಏಕತಾರಿ' ಮತ್ತು 'ಸುಖದ ನಾದ ಹೊರಡಿಸುವ ಕೊಳಲು'. ಇವು ಏಕಕಾಲಕ್ಕೆ ಆಧುನಿಕ ಮತ್ತು ಜನಪದ ಲೋಕದೃಷ್ಟಿಗಳನ್ನು ಒಳಗೊಂಡಿವೆ.

'ಊರ್ಧ್ವರೇತದ' ರಂಗಪ್ಪ ಇತಿಹಾಸದ ಅಧ್ಯಾಪಕ. ಈತನ ಬದುಕಿನ ನಾಲ್ಕು ಘಟ್ಟಗಳೂ ಸ್ವಬದುಕಿನ ಯಾನದ ತಲ್ಲಣಗಳಾಗಿವೆ. ರಂಗಪ್ಪನಿಗೆ ತಾನೊಬ್ಬ ಇತಿಹಾಸವನ್ನು ಓದಿ ಲೌಕಿಕ ಜಂಜಾಟಗಳಿಗೆ ಸಿಕ್ಕಿ ಒದ್ದಾಡುವ ಮನುಷ್ಯನೆಂದು ತಿಳಿದ ಗಳಿಗೆಯಲ್ಲೇ ಅದರಿಂದ ಪಾರಾಗಲು ಯತ್ನಿಸುತ್ತಾನೆ. ಹಣ, ಕಾಮ, ದಾಂಪತ್ಯಗಳ ಒಳಗೆ ಇದ್ದಕೊಂಡು ಕುಂಡಲಿನಿ ಸಾಧನೆಯನ್ನು ಮಾಡಲು ಹೊರಟಿರುವ ಈ ವ್ಯಕ್ತಿಯನ್ನು ಸದ್ಯದ ಸಾಮಾಜಿಕ ಸ್ಥಿತಿಗಳು ಮತ್ತು ಲೌಕಿಕ ತಲ್ಲಣಗಳು ಅಷ್ಟು ಬೇಗ ಬಿಡಲಾರವು. ಸಾಫ್ಟ್‌ವೇರ್ ಎಂಜಿನಿಯರ್ ಆದ ಅವನ ಮಗ ಅಮೆರಿಕದಲ್ಲಿ ಪೊಲೀಸರ ಬಂಧಿಯಾಗುವ ಭ್ರಮೆಗೆ ಸಿಕ್ಕಿಕೊಳ್ಳುತ್ತಾನೆ ಹಾಗೂ ವಿಶ್ವವಿದ್ಯಾಲಯಗಳ ತಾತ್ವಿಕ ವಿಚಾರಗಳಾದ ಮಾರ್ಕ್ಸ್‌ವಾದ, ಭೌತವಾದ ಮುಂತಾದ ವಾದಗಳಿಂದ ಬೇಸತ್ತು ಸ್ಥಳಿಯ ಜ್ಞಾನಪರಂಪರೆಯ ಶಾಕ್ತದಲ್ಲಿ ನೆಮ್ಮದಿಯನ್ನು ಹುಡುಕಲು ತೊಡಗುತ್ತಾನೆ. ಆದರೆ, ರಂಗಪ್ಪನಿಗೆ ಸದ್ಯದ ಮನಸ್ಸಿನ ತಾಕಲಾಟಗಳು ಅಲೌಕಿಕದ ಕಡೆಗೆ ಹೋಗಲು ಬಿಡಲಾರವು. ಈ ಕತೆಯ ವಸ್ತುವಿನ ದಿಗಂತಗಳನ್ನು ವಿಸ್ತರಿಸಿದ್ದರೆ ಧ್ಯಾನ ತನ್ನ ನಿಜ ಸ್ವರೂಪವನ್ನು ಕಳೆದು ಕೊಳ್ಳುತ್ತಿರುವುದನ್ನು ಚಿತ್ರಿಸಬಹುದಿತ್ತೇನೊ? ರಂಗಪ್ಪನ ದೃಷ್ಟಿಯಿಂದ ಕತೆ ಅಸಹಜವೆನಿಸುವುದಿಲ್ಲ.

ಇವರ ಕತೆಗಳಲ್ಲಿ ದೇಸೀ ಅಧ್ಯಾತ್ಮ, ಪ್ರಾದೇಶಿಕ ಬದುಕಿನ ತಲ್ಲಣಗಳು, ಕನಸು ಮತ್ತು ವಾಸ್ತವಗಳ ದ್ವಂದ್ವ, ಇವುಗಳ ನಡುವೆ ಸುಳಿಯುವ ಆಧುನಿಕ ಜೀವನದ ಏರುಪೇರು – ಮುಂತಾದ ಅಂಶಗಳು ಜಾಗಪಡೆದಿವೆ. ಕಟ್ಟಿಯವರು ಇಲ್ಲಿ ಮುಖ್ಯವಾಗುವುದು ಕಥನಗಾರಿಕೆಯ ಮುಖೇನ ಈ ವಸ್ತುಗಳನ್ನು ನಿರ್ವಹಣೆ ಮಾಡುವಲ್ಲಿ. ತತ್ವಪದ ಪರಂಪರೆಯ ದಾರಿಯಲ್ಲಿ ಬದುಕನ್ನು ಸಾಗಿಸುತ್ತಿರುವ ಮನುಷ್ಯರು 'ಏಕತಾರಿ' ಕತೆಯಲ್ಲಿ ಕಾಣಿಸಿಕೊಂಡರೂ ಅವರಿಗೆ ವಿಶಿಷ್ಟ ಬಗೆಯ ಸಂಘರ್ಷಗಳಿವೆ. ಚಂದ್ರಪ್ಪ ಮದುವೆಯ ನಂತರ ಪ್ರಸ್ತದ ದಿನವೇ ತನ್ನ ಮನಸ್ಸಿನ ವಿಚಿತ್ರ ಗುಣನ್ನು ಬಯಲಿಗೆಳೆಯುತ್ತಾನೆ. ಇದಕ್ಕೆ ಕಾರಣ – ಅಂದು ಅವನು ಕೂಡಬೇಕಿದ್ದ ಹೆಂಡತಿಯ ಮುಖ ತಂಗಿಯ ಹಾಗೆ ಕಾಣುವುದು. ಅವನು ಕಾಮವನ್ನು ಪೂರ್ತಿ ತೊರೆಯಲು ಸಾಧ್ಯವಾಗದೇ ತತ್ವಪದ ಗುಂಪಿನ ಮಹಿಳೆಯೊಬ್ಬಳ ಸಂಪರ್ಕ ಹೊಂದುತ್ತಾನೆ. ಇತ್ತ ಚಂದ್ರವ್ವ ತನ್ನ ಬದುಕನ್ನು ಸವಾಲಾಗಿ ಸ್ವೀಕರಿಸುತ್ತಾಳೆ. ಚಂದ್ರಪ್ಪನಿಗೆ ತನ್ನ ಗೀಗಿಪದಗಳು ಖಾಲಿಯಾದಂತೆಲ್ಲ ಅಂತರಂಗದಲ್ಲಿ ತಾನೂ ಖಾಲಿಯಾಗುತ್ತಿರುವುದು ಗೊತ್ತಾಗುತ್ತದೆ. 'ಖಾಲೀತನ' ಮನುಷ್ಯನನ್ನು ಯಾವ ದಿಕ್ಕಿಗೆ ಬೇಕಾದರೂ ಎಳೆಯಬಹುದು ಎಂಬುದಕ್ಕೆ ಕತೆಯ ಅಂತ್ಯ ನಿದರ್ಶನ. ಚಂದ್ರಪ್ಪನ ಪದಗಳ ಶಕ್ತಿ ಕಡಿಮೆಯಾಗಿ ಅಮೀನನ ಗೀಗೀ ಪದಗಳು ಮೆಲುಗೈಪಡೆದಾಗ, ಚಂದ್ರಪ್ಪ ನಿಜವಾದ ತತ್ವಪದಕಾರನಂತೆ ಕಾಣುತ್ತಾನೆ. ಅವನೊಳಗೆ 'ಕದ್ದು ಹಾದರ ಮಾಡುವುದು ಸಲ್ಲ' ಎಂಬ ಮಾತು ಅವ್ಯಕ್ತವಾಗಿ ಜನಿಸುತ್ತದೆ. ಆಕ್ಷಣವೇ ತನ್ನ ಊರಿನ ಕಡೆ ಮುಖ ಮಾಡುತ್ತಾನೆ. ಇಲ್ಲಿಯೂ ಚಂದ್ರಪ್ಪ ಅನಕ್ಷರಸ್ಥನಾದರೂ ನಿಜ ಬದುಕು ಯಾವುದೆಂಬ ಹುಡುಕಾಟದಲ್ಲಿದ್ದಾನೆ.